2018 ಕ.ತೀ.ವ 813

## ಸನ್ಮಾನ್ಯ ನ್ಯಾಯಮೂರ್ತಿ ರವಿ ಮಳಿಮಠ್
## ಮತ್ತು
## ಸನ್ಮಾನ್ಯ ನ್ಯಾಯಮೂರ್ತಿ ಜಾನ್ ಮೈಕಲ್ ಕೂನ್ಹ

### ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು –ವಿರುದ್ಧ– ದೊಡ್ಡಹನುಮ ಮತ್ತು ಇತರರು*

ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 374 (2)ನೇ ಪ್ರಕರಣದ ಮೇರೆಗೆ ಸಲ್ಲಿಸಲಾದ ಕ್ರಿಮಿನಲ್ ಅಪೀಲು.

ಆಪಾದಿತರು ಕದಿಯುವ ಉದ್ದೇಶದಿಂದ ನಡೆಸಿರುವ ಹತ್ಯೆಯನ್ನು ನಿರ್ಣಯಿಸುವ ಸಂಬಂಧದಲ್ಲಿ ಎರಡು ಪ್ರಮುಖ ಆರೋಪಗಳನ್ನು ರೂಪಿಸಿದ್ದು, ಶಿಕ್ಷೆಯನ್ನು ನಿರ್ಣಯಿಸುವ ಸಂದರ್ಭದಲ್ಲಿ ಮೊದಲ ಆರೋಪವನ್ನು ಪ್ರಸ್ತಾವಿಸದೆ, ಕೇವಲ ಎರಡನೇ ಆರೋಪವನ್ನು ಮಾತ್ರ ಪ್ರಸ್ತಾವಿಸಿ ನೀಡಿರುವ ಶಿಕ್ಷೆಯ ಬಗೆಗೆ ಈ ನ್ಯಾಯಾಲಯವು ಪರಿಗಣನೆಗೆ ಸಂಬಂಧಿಸಿದ ಅಂಶಗಳು ನಿಸ್ಸಂಶಯವಾಗಿ ಎರಡೂ ಆರೋಪಗಳನ್ನು ಒಳಗೊಳ್ಳುತ್ತದೆ. ಆದಾಗ್ಯೂ ಅಧಿವಿಚಾರಣಾ ನ್ಯಾಯಾಲಯದ ತೀರ್ಪು ಪರಿಗಣನೆಗಾಗಿ ಆರೋಪ ಸಂ.2ನ್ನು ಮತ್ತು ಅದಕ್ಕೆ ಸಂಬಂಧಿಸಿದ ಅಂಶಗಳನ್ನು ಮಾತ್ರ ಉಲ್ಲೇಖಿಸಿರುತ್ತದೆ. ದಾಖಲೆ ಮೇಲಿನ ಸಾಕ್ಷ್ಯ ಹಾಗೂ ವಿಷಯ ಕುರಿತ ಅಧಿವಿಚಾರಣಾ ನ್ಯಾಯಾಲಯದ ಇಡೀ ಚರ್ಚೆಯು ಭಾರತ ದಂಡ ಸಂಹಿತೆಯ 396ನೇ ಪ್ರಕರಣದ ಉಲ್ಲೇಖದೊಂದಿಗೆ ಮಾತ್ರವೇ ಇರುತ್ತದೆ. ಆರೋಪ ಸಂ.1 ಅಥವಾ ಭಾರತ ದಂಡ ಸಂಹಿತೆಯ 302ನೇ ಪ್ರಕರಣದ ಉಲ್ಲೇಖದೊಂದಿಗೆ ಪರಿಗಣನೆಗೆ ಸಂಬಂಧಿಸಿದ ಅಂಶವನ್ನು ಕುರಿತಂತೆ ಯಾವುದೇ ಚರ್ಚೆ, ಕಾರಣ ನೀಡಿಕೆ ಸಾಕ್ಷ್ಯದ ಉಚ್ಚಾರಣೆ ಇರುವುದಿಲ್ಲ. ಆದ್ದರಿಂದ, ಅಧಿವಿಚಾರಣಾ ನ್ಯಾಯಾಲಯದ ತೀರ್ಪು ದಂಡ ಪ್ರಕ್ರಿಯಾ ಸಂಹಿತೆಯ 354ನೇ ಪ್ರಕರಣದ ಆಜ್ಞಾಪಕ ಉಪಬಂಧಗಳೊಂದಿಗಿನ

*ಕ್ರಿಮಿನಲ್ ಆರ್.ಸಿ.ನಂ. 7/2010 ಇದರೊಂದಿಗೆ ಇತರೆ, ದಿನಾಂಕ 27ನೇ ಜುಲೈ, 2017.

ಅನುಸರಣೆಯಲ್ಲಿರುವುದಿಲ್ಲವೆಂದು ಅಭಿಪ್ರಾಯಪಡಲು ನಮಗೆ ಯಾವುದೇ ಸಂಕೋಚವಿರುವುದಿಲ್ಲ.

ಆರೋಪ ಸಂ.1 ಮತ್ತು ನಿರ್ಧರಣೆಗೆ ಸಂಬಂಧಿಸಿದ ಅಂಶಗಳ ಮೇಲೆ ನಿರ್ಣಯವನ್ನು ದಾಖಲಿಸುವಲ್ಲಿನ ಅಧಿವಿಚಾರಣಾ ನ್ಯಾಯಾಲಯದ ವಿಫಲತೆಯು ಭಾರತ ದಂಡ ಪ್ರಕ್ರಿಯಾ ಸಂಹಿತೆಯ 354ನೇ ಪ್ರಕರಣದ ಆಜ್ಞಾಪಕ ಉಪಬಂಧಗಳ ಉಲ್ಲಂಘನೆಗೆ ಕಾರಣವಾಗುತ್ತದೆ. ತೀರ್ಪು ಕಾನೂನುಬಾಹಿರವಾದುದಾಗಿರುತ್ತದೆ. ಇದು ತೀರ್ಪಿನ ದೋಷವಾಗಿರದೆ, ತೀರ್ಪಿನಲ್ಲಿಯೇ ಇರುವ ದೋಷವಾಗಿರುತ್ತದೆ.

ನಿರ್ಧರಣೆಗೆ ಸಂಬಂಧಿಸಿದಂತೆ ಆರೋಪಗಳನ್ನು ಹಾಗೂ ತರುವಾಯದ ಅಂಶಗಳನ್ನು ರೂಪಿಸಿದಾಗ್ಯೂ, ಅಧಿವಿಚಾರಣಾ ನ್ಯಾಯಾಲಯವು ನಿರ್ಧರಣೆಗೆ ಸಂಬಂಧಿಸಿದಂತೆ ಎಲ್ಲಾ ಅಂಶಗಳಿಗೂ ಉತ್ತರಿಸಿರುವುದಿಲ್ಲ. ಇದರಿಂದ ಅಧಿವಿಚಾರಣಾ ನ್ಯಾಯಾಲಯವು ಯುಕ್ತವಾಗಿ ಗಮನಹರಿಸದೆ ಮಾಡಿರುವ ಕಾರ್ಯವೆಂಬುದು ಸ್ಪಷ್ಟವಾಗಿ ಗೋಚರವಾಗುತ್ತದೆ. ಪರಿಶೀಲನಾಂಶಗಳನ್ನು ರೂಪಿಸಿದ ತರುವಾಯ ಕೂಡ, ಅಧಿವಿಚಾರಣಾ ನ್ಯಾಯಾಲಯವು, ಎಲ್ಲಾ ಪರಿಶೀಲನಾಂಶಗಳಿಗೂ ಉತ್ತರಿಸಲಾಗುವುದೆಂಬುದನ್ನು ಖಚಿತಪಡಿಸಿಕೊಳ್ಳಲು ಯಾವುದೇ ಎಚ್ಚರಿಕೆಯನ್ನು ತೆಗೆದುಕೊಂಡಿರುವುದಿಲ್ಲ. ಅಧಿವಿಚಾರಣಾ ನ್ಯಾಯಾಲಯವು ವಿಷಯವನ್ನು ಸಂಪೂರ್ಣವಾಗಿ ಗಮನಕೊಟ್ಟು ವಿಶ್ಲೇಷಿಸಿಲ್ಲವೆಂಬ ದೃಷ್ಟಿಯಲ್ಲಿ ತೀರ್ಪು ಊರ್ಜಿತವಾಗುವುದಿಲ್ಲ ಎಂದು ಅಭಿಪ್ರಾಯಪಟ್ಟು, ಇಲ್ಲಿ ಪ್ರಸ್ತಾಪಿಸಿದಂತೆ ಹೊಸದಾಗಿ ಪರಿಗಣಿಸಲು ಅಧಿವಿಚಾರಣಾ ನ್ಯಾಯಾಲಯಕ್ಕೆ ಹಿಂದಿರುಗಿಸಲಾಗಿರುತ್ತದೆ.

ಅಪೀಲುಗಳನ್ನು ಅಂಗೀಕರಿಸಲಾಗಿದೆ.

ಅರ್ಜಿದಾರರ ಪರ: ಶ್ರೀ ಎಚ್.ಎನ್. ನಿಲೋಗಲ್, ವಿಶೇಷ ಸರ್ಕಾರಿ ಅಭಿಯೋಜಕರು.
1, 4 ಮತ್ತು 5ನೇ ಪ್ರತ್ಯರ್ಜಿದಾರರ ಪರ: ಶ್ರೀ ವಿಶ್ವನಾಥ್ ಪೂಜಾರಿ ಕೆ. ವಕೀಲರು.
2 ಮತ್ತು 3ನೇ ಪ್ರತ್ಯರ್ಜಿದಾರರ ಪರ: ಶ್ರೀ ಹಸ್ಮತ್ ಪಾಷಾ, ವಕೀಲರು.

## ತೀರ್ಪು

**ನ್ಯಾಯಮೂರ್ತಿ ಶ್ರೀ ರವಿ ಮಳಿಮಠ:**

ಪ್ರಾಸಿಕ್ಯೂಷನ್‌ನ ಈ ಪ್ರಕರಣವು ದಿನಾಂಕ 07.11.2000ರಂದಿನದಾಗಿದ್ದು, ಅಂದು ಮಧ್ಯಾಹ್ನ ಸಂ.1 ರಿಂದ 5ರ ವರೆಗಿನ ಆಪಾದಿತರು ಕೊಲೆ ಮತ್ತು ಡಕಾಯಿತಿ ಮಾಡುವ ಏಕೈಕ ಉದ್ದೇಶದೊಂದಿಗೆ, ಮಾರಾಕಾಸ್ತ್ರಗಳೊಂದಿಗೆ ಪ್ರಾ.ಸಾ.1ಕ್ಕೆ ಸೇರಿದ ಮಾಗಡಿ ಮುಖ್ಯರಸ್ತೆಯ ಅಗ್ರಹಾರ ದಾಸರಹಳ್ಳಿ 6ನೇ ಮುಖ್ಯರಸ್ತೆಯ, 7ನೇ ಅಡ್ಡರಸ್ತೆಯ ಮನೆ ಸಂ.30ರ ಮೊದಲ ಮಹಡಿಗೆ ಪ್ರವೇಶಿಸಿರುತ್ತಾರೆ. ಅವರುಗಳು ಮನೆಯಲ್ಲಿ ಒಂಟಿಯಾಗಿದ್ದ ಶ್ರೀಮತಿ ಗೀತಾ ಎಂಬುವವರನ್ನು, ಆಕೆಯ ಕತ್ತು, ಬೆನ್ನು, ಹೊಟ್ಟೆ ಮತ್ತು ದೇಹದ ಇತರೆ ಭಾಗಗಳಿಗೆ ಇರಿದು ಕೊಲೆ ಮಾಡಿರುತ್ತಾರೆ. ಅವರು ಚಿನ್ನದ ಮಾಂಗಲ್ಯದಸರ, ಚಿನ್ನದ ಮಾಟಿ(ಓಲೆ) ಮತ್ತು ಇತರೆ ಚಿನ್ನದ ಆಭರಣಗಳನ್ನು ಆಕೆಯಿಂದ ದೋಚಿದ್ದು, ಸೀರೆ ಹಾಗೂ ಶರ್ಟ್‌ಗಳನ್ನು ಕೂಡ ಕದ್ದಿರುತ್ತಾರೆ.

2. ಪ್ರಾ.ಸಾ.1 ದೂರನ್ನು ಸಲ್ಲಿಸಿ, ಪ್ರಕರಣವನ್ನು ಭಾರತ ದಂಡ ಸಂಹಿತೆಯ 34ನೇ ಪ್ರಕರಣದೊಂದಿಗೆ ಓದಲಾದ 302 ಹಾಗೂ 396ನೇ ಪ್ರಕರಣಗಳಡಿಯಲ್ಲಿ ದಂಡನೀಯವಾದ ಅಪರಾಧಗಳಿಗೆ ಸಂಬಂಧಿಸಿದಂತೆ, ಅಪರಾಧ ಸಂಖ್ಯೆ: 438/ 2000 ಎಂದು ನೋಂದಾಯಿಸಲಾಗಿರುತ್ತದೆ. ತನಿಖೆಯನ್ನು ಕೈಗೆತ್ತಿಕೊಳ್ಳಲಾಗಿರುತ್ತದೆ. ಆರೋಪ–ಪಟ್ಟಿಯನ್ನು ಸಲ್ಲಿಸಲಾಗಿರುತ್ತದೆ. ಆಪಾದಿತರು ತಪ್ಪನ್ನು ಒಪ್ಪಿಕೊಂಡಿರುವುದಿಲ್ಲ. ಪ್ರಕರಣವನ್ನು ಅಧಿವಿಚಾರಣೆಗೆ ಇಡಲಾಗಿರುತ್ತದೆ.

3. ಈ ವಾದವನ್ನು ರುಜುವಾತುಪಡಿಸಲು ಪ್ರಾಸಿಕ್ಯೂಷನ್ ಎಲ್ಲಾ 15 ಸಾಕ್ಷ್ಯಗಳನ್ನು ಪರೀಕ್ಷಿಸಲಾಯಿತು ಹಾಗೂ 17 ಭೌತಿಕ ಪದಾರ್ಥಗಳೊಂದಿಗೆ 24 ನಿಶಾನೆಗಳನ್ನು ಗುರುತು ಮಾಡಲಾಯಿತು. ಪ್ರತಿವಾದದ ಪರವಾಗಿ ಒಂದು ನಿಶಾನೆಯನ್ನು ಗುರುತು ಮಾಡಲಾಗಿರುತ್ತದೆ. ಪ್ರಶ್ನಿತ ತೀರ್ಪಿನ ಮೂಲಕ ಅಧಿವಿಚಾರಣಾ

ನ್ಯಾಯಾಲಯವು, ಭಾರತ ದಂಡ ಸಂಹಿತೆಯ 396ನೇ ಪ್ರಕರಣದಡಿಯಲ್ಲಿ ದಂಡನೀಯವಾದ ಅಪರಾಧಕ್ಕೆ ಸಂಬಂಧಿಸಿದಂತೆ ಆಪಾದಿತ ಸಂ.1 ರಿಂದ 5ರವರುಗಳನ್ನು ಅಪರಾಧ ನಿರ್ಣೀತರನ್ನಾಗಿಸಿ, ಪ್ರತಿಯೊಬ್ಬರಿಗೂ 5,000/– ರೂ.ಗಳ ಜುಲ್ಮಾನೆಯೊಂದಿಗೆ ಮರಣದಂಡನೆ ವಿಧಿಸಿರುತ್ತದೆ.

4. ಪ್ರಕರಣ –366ರ ಅನುಸಾರವಾಗಿ, ಈ ನ್ಯಾಯಾಲಯಕ್ಕೆ ಉಲ್ಲೇಖವನ್ನು ಮಾಡಿ, ಅದನ್ನು ಕ್ರಿಮಿನಲ್ ಆರ್.ಸಿ.ಸಂ: 7/2010 ಎಂದು ನೋಂದಾಯಿಸಲಾಗಿರುತ್ತದೆ. ಖುಲಾಸೆಯನ್ನು ಕೋರಿ, ಆಪಾದಿತ ಸಂ.1, 4 ಹಾಗೂ 5ರವರುಗಳು ಕ್ರಿಮಿನಲ್ ಅಪೀಲು ಸಂ: 1289/2010 ಹಾಗೂ ಆಪಾದಿತ ಸಂ.2 ಹಾಗೂ 3 ರವರುಗಳು ಕ್ರಿಮಿನಲ್ ಅಪೀಲು ಸಂ. 810/2011 ಸಲ್ಲಿಸಿರುತ್ತಾರೆ.

5. ಅಪೀಲುದಾರರ ಪರ ಮಾನ್ಯ ವಕೀಲರಾದ ಶ್ರೀ ಹಶಮತ್ ಪಾಷಾರವರು, ಅಧಿವಿಚಾರಣಾ ನ್ಯಾಯಾಲಯವು, ಭಾರತ ದಂಡ ಸಂಹಿತೆಯ 396ನೇ ಪ್ರಕರಣದಡಿಯಲ್ಲಿ ದಂಡನೀಯವಾದ ಅಪರಾಧಗಳಿಗೆ ಸಂಬಂಧಿಸಿದಂತೆ ಆಪಾದಿತರ ಅಪರಾಧ ನಿರ್ಣಯಿಸಿ ತಪ್ಪನ್ನು ಎಸಗಿದೆಯೆಂದು ವಾದಿಸಿರುತ್ತಾರೆ. ಪರಿಗಣನೆಗಿರುವ ಎಲ್ಲಾ ಅಂಶಗಳನ್ನು ಉತ್ತರಿಸದಿರುವುದಿಲ್ಲವೆಂಬ ವಾಸ್ತವಾಂಶದ ಹಿನ್ನೆಲೆಯಲ್ಲಿ ಅಧಿವಿಚಾರಣಾ ನ್ಯಾಯಾಲಯದ ಆದೇಶವು ಸಮರ್ಥನೀಯವಾಗಿರುವುದಿಲ್ಲವೆಂದು ವಾದಿಸಿರುತ್ತಾರೆ. ಎರಡು ಆರೋಪಗಳನ್ನು ಆಪಾದಿತರ ವಿರುದ್ಧ ವಿಧಿಸಲಾಗಿದ್ದಾಗ್ಯೂ, ಕೇವಲ ಎರಡನೇ ಆರೋಪಕ್ಕೆ ಮಾತ್ರ ಉತ್ತರಿಸಲಾಗಿರುತ್ತದೆ. ಹಾಗಾಗಿ ಇವರು, ಅಧಿವಿಚಾರಣಾ ನ್ಯಾಯಾಲಯವು ದೋಷವನ್ನು ಎಸಗಿದ್ದು ಅಧಿವಿಚಾರಣೆಯನ್ನು ಪರಿಶೀಲಿಸಬೇಕೆಂದು ವಾದಿಸಿರುತ್ತಾರೆ.

6. ಮತ್ತೊಂದು ಕಡೆ, ಮಾನ್ಯ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್‌ರವರಾದ ಶ್ರೀ ಎಚ್.ಎನ್ ನಿಲೋಗಲ್‌ರವರು ಇದಕ್ಕೆ ಪ್ರತಿವಾದಿಸಿರುತ್ತಾರೆ. ಇವರು ಮಧ್ಯೆ ಪ್ರವೇಶಿಕೆಯನ್ನು ಸಮರ್ಥಿಸಿ, ಅಧಿವಿಚಾರಣಾ ನ್ಯಾಯಾಲಯವು ಯಾವುದೇ ದೋಷವನ್ನು ಎಸಗಿರುವುದಿಲ್ಲವೆಂದು ವಾದಿಸಿರುತ್ತಾರೆ. ಅದೂ ಅಲ್ಲದೆ ಈ

ನ್ಯಾಯಾಲಯಕ್ಕೆ, ಅಧಿವಿಚಾರಣಾ ನ್ಯಾಯಾಲಯವು ಎಸಗಿರುವ ತಪ್ಪಿನಿಂದ ಹೊರಬರಲು ಸಾಕಷ್ಟು ಅಧಿಕಾರವನ್ನು ಹೊಂದಿದೆ. ಹಾಗಾಗಿ, ಇವರು ಅಪೀಲುಗಳು ಹಾಗೂ ಪರಾಮರ್ಶನಗಳನ್ನು ತಿರಸ್ಕರಿಸಲು ವಾದಿಸಿರುತ್ತಾರೆ.

7. ಮಾನ್ಯ ನ್ಯಾಯವಾದಿಗಳ ವಾದಗಳನ್ನು ಆಲಿಸಿ, ದಾಖಲೆಗಳನ್ನು ಪರಿಶೀಲಿಸಲಾಗಿರುತ್ತದೆ.

8. ಮಂಡಿಸಿದ ವಾದಗಳ ಹಿನ್ನೆಲೆಯಲ್ಲಿ, ನಾವು, ಅಧಿವಿಚಾರಣಾ ನ್ಯಾಯಾಲಯದ ತೀರ್ಪು ಕಾನೂನು ಬಾಹಿರವಾದುದೇ ಅಥವಾ ಇಲ್ಲವೆ ಹಾಗೂ ಆ ತರುವಾಯ ಅವಶ್ಯಕವಾದಲ್ಲಿ, ಪ್ರಕರಣದ ಗುಣಾರ್ಹತೆಗಳನ್ನು ಪರಿಗಣಿಸಬೇಕೆ ಎಂಬುದನ್ನು ಪರಿಗಣಿಸಬೇಕಾಗಿರುತ್ತದೆ.

9. ಆಪಾದಿತರ ವಿರುದ್ಧ ಎರಡು ಆರೋಪಗಳನ್ನು ರೂಪಿಸಲಾಗಿದ್ದು, ಅವು ಈ ಮುಂದಿನಂತಿವೆ:

> *"ಮೊದಲನೆಯದಾಗಿ, 1 ರಿಂದ 5 ರ ವರೆಗಿನ ಆಪಾದಿತರಾದ ನೀವುಗಳು, ದಿನಾಂಕ 07.11.2000ರಂದು ಮಧ್ಯಾಹ್ನ ಕೊಲೆ ಮಾಡುವ ಸಾಮಾನ್ಯ ಉದ್ದೇಶದೊಂದಿಗೆ ಸಿ.ಡಬ್ಲ್ಯೂ.1 ಬಿ.ಆರ್. ಜಯರಾಮಯ್ಯನವರಿಗೆ ಸೇರಿದ ಮಾಗಡಿ ಮುಖ್ಯ ರಸ್ತೆಯ ಅಗ್ರಹಾರ ದಾಸರಹಳ್ಳಿಯ 6ನೇ ಮುಖ್ಯರಸ್ತೆ, 7ನೇ ಅಡ್ಡರಸ್ತೆಯಲ್ಲಿರುವ ಕಟ್ಟಡದ ಮೊದಲ ಮಹಡಿಯಲ್ಲಿರುವ ಮನೆ ಸಂ.30ಕ್ಕೆ ಕಾನೂನುಬಾಹಿರವಾಗಿ ಚಾಕುಗಳೊಂದಿಗೆ ಡಕಾಯಿತಿ ಮಾಡಲು ಮಾರಕಾಸ್ತ್ರಗಳೊಂದಿಗೆ ಪ್ರವೇಶಿಸಿರುತ್ತೀರಿ ಮತ್ತು ಸಿ.ಡಬ್ಲ್ಯೂ.1 ಬಿ.ಆರ್. ಜಯರಾಮಯ್ಯನ ಸುಮಾರು 30 ವರ್ಷ ವಯೋಮಾನದ ಆತನ ಪತ್ನಿಯಾದ ಹಾಗೂ ಮನೆಯಲ್ಲಿ ಒಂಟಿಯಾಗಿದ್ದ ಶ್ರೀಮತಿ ಗೀತಾ ಎಂಬುವವರನ್ನು ಆಕೆಯ ಕತ್ತು, ಬೆನ್ನು, ಹೊಟ್ಟೆ ಹಾಗೂ ಆಕೆಯ ದೇಹದ ಇತರೆ ಭಾಗಗಳ*

*ಮೇಲೆ ಇರಿದು ಕೊಲೆ ಮಾಡಿ, ಆ ಮೂಲಕ ಭಾರತ ದಂಡ ಸಂಹಿತೆಯ 34ನೇ ಪ್ರಕರಣದೊಂದಿಗೆ ಓದಿದ 302ನೇ ಪ್ರಕರಣದಡಿಯಲ್ಲಿ ಹಾಗೂ ಈ ನ್ಯಾಯಾಲಯದ ಸಂಜ್ಞೇಯತೆಯೊಳಗೆ ದಂಡನೀಯವಾದ ಅಪರಾಧವನ್ನು ಮಾಡಿರುತ್ತೀರಿ.*

*ಎರಡನೆಯದಾಗಿ, ನೀವುಗಳಾದ ಎ1 ರಿಂದ ಎ5ರವರುಗಳು ಮೇಲೆ ಹೇಳಿದ ದಿನ, ಸಮಯ ಹಾಗೂ ಸ್ಥಳದಲ್ಲಿ ಸುಮಾರು 30 ವರ್ಷಗಳ ಶ್ರೀಮತಿ ಗೀತಾಳ ಕೊಲೆ ಮಾಡಿದ ತರುವಾಯ, ಆಕೆಯ ಮೈಮೇಲಿದ್ದ ಚಿನ್ನದ ಮಾಂಗಲ್ಯದ ಸರ, ಆಕೆಯ ಮನೆಯಿಂದ ಒಂದು ಜೊತೆ ಚಿನ್ನದ ಮಾಟಿ, 2 ಜೊತೆ ಚಿನ್ನದ ಹ್ಯಾಂಗಿಂಗ್ಸ್, ಒಂದು ಸೀರೆ ಹಾಗೂ ಒಂದು ಶರ್ಟ್‌ನ್ನು ಕದ್ದಿರುತ್ತೀರಿ. ಆ ಮೂಲಕ ಭಾರತ ದಂಡ ಸಂಹಿತೆಯ 34 ಪ್ರಕರಣದ ಓದಿನೊಂದಿಗೆ 396ನೇ ಪ್ರಕರಣದಡಿಯಲ್ಲಿ ಹಾಗೂ ಈ ನ್ಯಾಯಾಲಯ ಸಂಜ್ಞೇಯತೆಯೊಳಗೆ ಅಪರಾಧವನ್ನು ಮಾಡಲಾಗಿರುತ್ತದೆ."*

10. ಅಧಿವಿಚಾರಣಾ ನ್ಯಾಯಾಲಯವು, ದಾಖಲೆ ಮೇಲಿರುವ ಸಾಕ್ಷ್ಯ ಹಾಗೂ ವಿಷಯವನ್ನು ಪರಿಗಣಿಸಿದ ಮೇಲೆ, ತೀರ್ಪಿನಲ್ಲಿ ಪರಿಗಣನೆಗಾಗಿ ಈ ಮುಂದಿನ ಅಂಶಗಳನ್ನು ರೂಪಿಸಿದ್ದು, ಅವು ಈ ಮುಂದಿನಂತಿವೆ:

*1. "ಬಿ.ಆರ್.ಜಯರಾಮಯ್ಯ ಇವರ ಮನೆಗೆ ವ್ಯಕ್ತಿಗಳು ಅಕ್ರಮವಾಗಿ ಪ್ರವೇಶ ಮಾಡಿ ಸುಲಿಗೆ ಮಾಡಿ ಮನೆಯಲ್ಲಿದ್ದ ಅವರ ಹೆಂಡತಿಯಾದ ಗೀತಾ ಇವರ ಮೇಲೆ ಹಲ್ಲೆ ಮಾಡಿ ಆಕೆಯು ಧರಿಸಿದ್ದ ಮಾಂಗಲ್ಯದಸರವನ್ನು ಮತ್ತು ಮನೆಯಲ್ಲಿದ್ದ 22,400 ರೂ.ಬೆಲೆಬಾಳುವ ಒಡವೆಗಳನ್ನು ದೋಚಿದ್ದಾರೆ ಎಂಬುದಾಗಿ ಅಭಿಯೋಜನೆಯು ರುಜುವಾತು ಮಾಡಿದೆಯೇ?*

2. ಐಎಲ್‌ಆರ್ 2013 ಕೆಎಆರ್ 2198

*2. ಮತ್ತು ಸದರಿಯವರನ್ನು ಹತ್ಯೆ ಮಾಡಿದ್ದು, ಇವರ ಹತ್ಯೆಯು ನರಹತ್ಯೆಯೇ ಅಥವಾ ಆತ್ಮಹತ್ಯೆಯೇ?*

*3. ನರಹತ್ಯೆಯಾಗಿದ್ದಲ್ಲಿ, ಅದು ಉದ್ದೇಶಪೂರ್ವಕವಾದ ಕೊಲೆಯೇ?*

*4. ಅದು ಕೊಲೆಯಾಗಿದ್ದಲ್ಲಿ, ಅದನ್ನು ಆರೋಪಿಗಳೇ ಮಾಡಿದ್ದಾರೆಯೇ ಎಂಬುವ ಅಂಶ ಉದ್ಭವಿಸುತ್ತದೆ."*

11. ಆದಾಗ್ಯೂ, ಅಧಿವಿಚಾರಣಾ ನ್ಯಾಯಾಲಯವು, ಭಾರತ ದಂಡ ಸಂಹಿತೆಯ 396ನೇ ಪ್ರಕರಣದಡಿಯಲ್ಲಿ ದಂಡನೀಯವಾದ ಅಪರಾಧಕ್ಕೆ ಸಂಬಂಧಿಸಿದಂತೆ 1 ರಿಂದ 5ರ ವರೆಗಿನ ಆಪಾದಿತರನ್ನು ಅಪರಾಧ ನಿರ್ಣೀತರನ್ನಾಗಿಸಿದೆ: ಅದನ್ನು ಈ ಮುಂದಿನಂತೆ ಓದಲಾಗಿದೆ.

: **ಶಿಕ್ಷೆ** :

ಕಲಂ 235(2) ದಂಡ ಪ್ರಕ್ರಿಯಾ ಸಂಹಿತೆ ಪ್ರಕಾರ 1ನೇ ಆರೋಪಿ ದೊಡ್ಡಹನುಮ ತಂದೆ ವೆಂಕಟಪ್ಪ ಯು.ಟಿ.ಪಿ. ಸಂಖ್ಯೆ 10176, 2ನೇ ಆರೋಪಿ ವೆಂಕಟೇಶ್ ಅಲಿಯಾಸ್ ಚಂದ್ರ, ಯು.ಟಿ.ಪಿ.ನಂ. 10175, 3ನೇ ಆರೋಪಿ ಮುನಿಕೃಷ್ಣ ಅಲಿಯಾಸ್ ವೆಂಕಟಸ್ವಾಮಿ ಯು.ಡಿ.ಪಿ.ನಂ.10178, 4ನ# ಆರೋಪಿ ನಲ್ಲತಿಮ್ಮ ಬಿನ್ ಗೋರಾಬೋವಿ ಯು.ಟಿ.ಪಿ.ನಂ.10177, 5ನೇ ಆರೋಪಿ ಲಕ್ಷ್ಮಮ್ಮ ಯು.ಟಿ.ಪಿ.ನಂ.10179 ಇವರಿಗೆ ಭಾರತ ದಂಡ ಸಂಹಿತೆಯ 396ನೇ ಪ್ರಕರಣದ ಮೇರೆಗೆ ಈ ಅಪರಾಧಕ್ಕೆ ಮರಣದಂಡನೆಯ ಶಿಕ್ಷೆ ವಿಧಿಸಲಾಗಿದೆ. ಅವರನ್ನು ಸಾಯುವವರೆಗೆ ನೇಣು ಹಾಕುವಂತೆ ಆದೇಶಿಸಿದೆ. ಈ ಶಿಕ್ಷೆಯುನ್ನು ಮಾನ್ಯ ಕರ್ನಾಟಕ ಉಚ್ಚ

ನ್ಯಾಯಾಲಯದಿಂದ ಕಲಂ 366(1) ಸಿ.ಆರ್.ಪಿ.ಸಿ. ಪ್ರಕಾರ ಸ್ಥಿರಗೊಳಿಸಿದ (ಕನ್‌ಪರ್‌ಮೇಷನ್) ಆದ ನಂತರ ಜಾರಿಗೆ ಬರತಕ್ಕದ್ದು ಎಂಬುದಾಗಿ ಸೃಷ್ಟೀಕರಿಸಿದೆ ಮತ್ತು ಪ್ರತಿ ಆರೋಪಿಗೆ ತಲಾ 5 ಸಾವಿರ ರೂ.ಗಳ ದಂಡವನ್ನೂ ಸಹ ವಿಧಿಸಿದೆ.

2. ಆರೋಪಿಗಳಿಗೆ ಮರಣದಂಡನೆ ವಿಧಿಸಿರುವ ಕಾರಣ ಅವರು ವಿಚಾರಣಾ ಅವಧಿಯಲ್ಲಿ ಅನುಭವಿಸಿರುವ ಜೈಲು ಶಿಕ್ಷೆಯನ್ನು ಕಲಂ 428 ಭಾರತ ದಂಡ ಸಂಹಿತೆಯ ಪ್ರಕಾರ ವಜಾವಟ್ ಕೊಡುವ ಪ್ರಮೇಯ ಉಂಟಾಗುವುದಿಲ್ಲ.

3. ಆರೋಪಿಗಳಿಗೆ ಕಲಂ 374 ಭಾರತ ದಂಡ ಸಂಹಿತೆಯ ಪ್ರಕಾರ ಈ ತೀರ್ಪಿನ ಮತ್ತು ಶಿಕ್ಷೆಯ ವಿರುದ್ಧ ಅವಧಿ ಪರಿಮಿತಿ ಅಧಿನಿಯಮ, 1963 ಅನುಚ್ಛೇದ 115–ಎ ಪ್ರಕಾರ 30 ದಿವಸಗಳೊಳಗಾಗಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಬಹುದಾಗಿದೆ ಎಂಬುದಾಗಿ ತಿಳಿಸಲಾಗಿದೆ.

4. ಕಛೇರಿಯವರು ಬೆಂಗಳೂರಿನ ಕೇಂದ್ರ ಕಾರಾಗೃಹದ ಸೂಪರಿಂಟೆಂಡೆಂಟ್ ಇವರಿಗೆ ಆರೋಪಿಗಳಿಗೆ ವಿಧಿಸುವ ಶಿಕ್ಷೆಯ ಬಗ್ಗೆ ವಾರೆಂಟನ್ನು ಕಳುಹಿಸುವುದು ಮತ್ತು ಕೂಡಲೇ ತೀರ್ಪು ಶಿಕ್ಷೆ ಮತ್ತು ಈ ಪ್ರಕರಣದ ಎಲ್ಲಾ ದಾಖಲಾತಿಗಳನ್ನು ಕಡತಗಳನ್ನು ಕಲಂ 366(1) ಸಿ.ಆರ್.ಪಿ.ಸಿ. ಪ್ರಕಾರ ಆರೋಪಿಗಳ ಮರಣ ದಂಡನೆ ಶಿಕ್ಷೆಯ ಸೃಷ್ಟೀಕರಿಸುವ (ಕನ್‌ಫರ್‌ಮೇಷನ್) ಸಲುವಾಗಿ ಮಾನ್ಯ ಉಚ್ಚನ್ಯಾಯಾಲಯಕ್ಕೆ ಕಳುಹಿಸಿಕೊಡತಕ್ಕದ್ದು ಎಂದು ನಿರ್ದೇಶಿಸಿದೆ.

5. ಕಚೇರಿಯವರು ಕ್ರಿಮಿನಲ್ಸ್ ರೂಲ್ಸ್ ಆಫ್ ಪ್ರಾಕ್ಟೀಸ್ 1968ರ ನಿಯಮ 7(3)ರ ಪ್ರಕಾರ ಅದರಲ್ಲಿ ನಮೂದಿಸಿದವರೆಲ್ಲರಿಗೂ

ಈ ಪ್ರಕರಣದ ತೀರ್ಪಿನ ನಕಲನ್ನು ಯಾವುದೇ ಶುಲ್ಕವಿಲ್ಲದೆ ಕೊಡಲು ಆದೇಶಿಸಿದೆ.

6. ಆರೋಪಿಗಳಿಗೆ ಸಹ ಈ ತೀರ್ಪಿನ ಮತ್ತು ಶಿಕ್ಷೆಯ ನಕಲನ್ನು ಉಚಿತವಾಗಿ ಕೊಟ್ಟು ಹಿಂಬರಹ ಪಡೆದುಕೊಳ್ಳತಕ್ಕದ್ದು.

7. ದಂಡ ಪ್ರಕ್ರಿಯಾ ಸಂಹಿತೆಯ 357ನೇ ಪ್ರಕರಣದ ಮೇರೆಗೆ ಆರೋಪಿಯು ದಂಡವನ್ನು ಪಾವತಿಸಿದ್ದಲ್ಲಿ 25 ಸಾವಿರ ರೂ.ಗಳನ್ನು ಪ್ರಾ.ಸಾ.1 ಇವರಿಗೆ ಪರಿಹಾರವಾಗಿ ಪಾವತಿಸುವಂತೆ ಆದೇಶಿಸಿದೆ. ಮು.ಮಾ.1 ರಿಂದ 5, ಪ್ರಾ.ಸಾ.1 ಇವರಿಗೆ ಹಿಂತಿರುಗಿಸುವುದು ಮು.ಮಾ.6ರಿಂದ 17 ಬೆಲೆಬಾಳುವ ಕಾರಣ ಮೇಲ್ಮನವಿ ಸಮಯ ಮುಗಿದ ನಂತರ ಅವುಗಳನ್ನು ನಾಶಪಡಿಸಬೇಕೆಂದು ಆದೇಶಿಸಿದೆ".

12. ಇಲ್ಲಿ, ನಮಗೆ, ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ತೀರ್ಪಿನಲ್ಲಿ ದೋಷ ಕಂಡುಬಂದಿದ್ದು, ದಂಡ ಪ್ರಕ್ರಿಯಾ ಸಂಹಿತೆಯ 354ನೇ ಪ್ರಕರಣವನ್ನು ಈ ಮುಂದಿನಂತೆ ಓದಲಾಗಿರುತ್ತದೆ:

***"354. ತೀರ್ಪಿನ ಭಾಷೆ ಮತ್ತು ಒಳಾಂಶಗಳು.–***
*(1) ಸಂಹಿತೆಯಲ್ಲಿ ಅನ್ಯಥಾ ಸ್ಪಷ್ಟವಾಗಿ ಉಪಬಂಧಿಸಿದ್ದ ಹೊರತು, 353ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಪ್ರತಿಯೊಂದು ತೀರ್ಪು,–*

*(ಎ) ನ್ಯಾಯಾಲಯದ ಭಾಷೆಯಲ್ಲಿ ಬರೆಯಲ್ಪಟ್ಟಿರತಕ್ಕದ್ದು;*

*(ಬಿ) ನಿರ್ಧರಿಸಬೇಕಾದ ಅಂಶ ಅಥವಾ ಅಂಶಗಳನ್ನು, ಅವುಗಳ ಮೇಲಿನ ತೀರ್ಮಾನ ಮತ್ತು ತೀರ್ಮಾನದ ಕಾರಣಗಳನ್ನು ಒಳಗೊಂಡಿರತಕ್ಕದ್ದು;*

*(ಸಿ) ಯಾವ ಅಪರಾಧಕ್ಕಾಗಿ (ಯಾವುದಾದರೂ ಇದ್ದರೆ) ಆಪಾದಿತನನ್ನು ಅಪರಾಧಿಯೆಂದು ನಿರ್ಣಯಿಸಲಾಗಿದೆಯೋ ಆ ಅಪರಾಧವನ್ನು ಮತ್ತು ಭಾರತ ದಂಡ ಸಂಹಿತೆಯ (1860ರ 45) ಯಾವ ಪ್ರಕರಣದ ಮೇರೆಗೆ ಅಥವಾ ಯಾವ ಇತರ ವಿಧಿಯ ಮೇರೆಗೆ ಅವನನ್ನು ಅಪರಾಧಿಯೆಂದು ನಿರ್ಣಯಿಸಲಾಗಿದೆಯೋ ಅದನ್ನು ಮತ್ತು ಅವನಿಗೆ ಆದೇಶಿಸಿದ ದಂಡನೆಯುನ್ನು ನಿರ್ದಿಷ್ಟಪಡಿಸತಕ್ಕದ್ದು.*

*(ಡಿ) ಅದು ನಿರಪರಾಧಿಯೆಂಬ ತೀರ್ಪಾಗಿದ್ದರೆ, ಯಾವ ಅಪರಾಧದ ಬಗ್ಗೆ ಆಪಾದಿತನನ್ನು ನಿರಪರಾಧಿ ಎಂದು ತೀಮಾನಿಸಲಾಯಿತೋ ಆ ಅಪರಾಧವನ್ನು ಹೇಳತಕ್ಕದ್ದು ಮತ್ತು ಅವನನ್ನು ಸ್ವತಂತ್ರಗೊಳಿಸಬೇಕೆಂದು ನಿರ್ದೇಶಿಸತಕ್ಕದ್ದು.*

ಇದೂ ಕೂಡ, ಭಾರತ ದಂಡ ಪ್ರಕ್ರಿಯಾ ಸಂಹಿತೆಯ 353ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಪ್ರತಿಯೊಂದು ತೀರ್ಪು ಇತರೆ ಆಯಾಮಗಳೊಂದಿಗೆ, ನಿರ್ಧರಣೆಗೆ ಸಂಬಂಧಿಸಿದ ಅಂಶಗಳು, ಅದರ ಕುರಿತಾದ ನಿರ್ಧರಣೆ ಹಾಗೂ ನಿರ್ಧರಣೆಗೆ ಸಂಬಂಧಿಸಿದ ಕಾರಣಗಳನ್ನು ಒಳಗೊಂಡಿರಬೇಕೆಂಬ ಮೂಲ ಪ್ರಮೇಯವೇ ಆಗಿರುತ್ತದೆ.

13. ಪರಿಗಣನೆಗೆ ಸಂಬಂಧಿಸಿದ ಅಂಶಗಳು ನಿಸ್ಸಂಶಯವಾಗಿ ಎರಡೂ ಆರೋಪಗಳನ್ನು ಒಳಗೊಳ್ಳುತ್ತದೆ. ಆದಾಗ್ಯೂ ಅಧಿವಿಚಾರಣಾ ನ್ಯಾಯಾಲಯದ ತೀರ್ಪು ಪರಿಗಣನೆಗಾಗಿ ಆರೋಪ ಸಂ.2ನ್ನು ಮತ್ತು ಅದಕ್ಕೆ ಸಂಬಂಧಿಸಿದ ಅಂಶಗಳನ್ನು ಮಾತ್ರ ಉಲ್ಲೇಖಿಸಿರುತ್ತದೆ. ದಾಖಲೆ ಮೇಲಿನ ಸಾಕ್ಷ್ಯ ಹಾಗೂ ವಿಷಯ ಕುರಿತ ಅಧಿವಿಚಾರಣಾ ನ್ಯಾಯಾಲಯದ ಇಡೀ ಚರ್ಚೆಯ ಭಾರತ ದಂಡ ಸಂಹಿತೆಯ 396ನೇ ಪ್ರಕರಣದ ಉಲ್ಲೇಖದೊಂದಿಗೆ ಮಾತ್ರವೇ ಇರುತ್ತದೆ. ಆರೋಪ ಸಂ.1 ಅಥವಾ ಭಾರತ ದಂಡ ಸಂಹಿತೆಯ 302ನೇ ಪ್ರಕರಣದ ಉಲ್ಲೇಖದೊಂದಿಗೆ

ಪರಿಗಣನೆಗೆ ಸಂಬಂಧಿಸಿದ ಅಂಶವನ್ನು ಕುರಿತಂತೆ ಯಾವುದೇ ಚರ್ಚೆ, ಕಾರಣ ನೀಡಿಕೆ ಸಾಕ್ಷ್ಯದ ಉಚ್ಚಾರಣೆ ಇರುವುದಿಲ್ಲ. ಆದ್ದರಿಂದ, ಅಧಿವಿಚಾರಣಾ ನ್ಯಾಯಾಲಯದ ತೀರ್ಪು ದಂಡ ಪ್ರಕ್ರಿಯಾ ಸಂಹಿತೆಯ 354ನೇ ಪ್ರಕರಣದ ಆಜ್ಞಾಪಕ ಉಪಬಂಧಗಳೊಂದಿಗಿನ ಅನುಸರಣೆಯಲ್ಲಿರುವುದಿಲ್ಲವೆಂದು ಅಭಿಪ್ರಾಯಪಡಲು ನಮಗೆ ಯಾವುದೇ ಸಂಕೋಚವಿರುವುದಿಲ್ಲ.

14(ಎ) ಮಾನ್ಯ ಪಬ್ಲಿಕ್ ಪ್ರಾಸಿಕ್ಯೂಟರ್‌ರವರ ವಾದವೆಂದರೆ, ದೋಷವನ್ನು, ಅಪೀಲು ನ್ಯಾಯಾಲಯದ ಅಧಿಕಾರವನ್ನು ಚಲಾಯಿಸುವ ಮೂಲಕ ಅಲಕ್ಷಿಸಬಹುದು ಎಂಬುದಾಗಿರುತ್ತದೆ. ಆರೋಪ ಕುರಿತಂತೆ ಯಾವುದೇ ನಿರ್ಣಯಕ್ಕೆ ಬರಲಾಗದಿದ್ದಲ್ಲಿ, ಈ ನ್ಯಾಯಾಲಯವು ಅದರ ಮೇಲೆ ನಿರ್ಣಯವನ್ನು ದಾಖಲು ಮಾಡಬಹುದಾಗಿರುತ್ತದೆ.

(ಬಿ) ನಾವು ಅಂಥ ವಾದವನ್ನು ಒಪ್ಪಿಕೊಳ್ಳಲು ಸಮರ್ಥರಾಗಿರುವುದಿಲ್ಲ. ಮೂಲತಃ ದಂಡ ಪ್ರಕ್ರಿಯಾ ಸಂಹಿತೆಯ 354ನೇ ಪ್ರಕರಣದ ಆಜ್ಞಾಪಕ ಉಪಬಂಧಗಳ ಅನುಪಾಲನೆ ಆಗಿರುವುದಿಲ್ಲ ಎಂಬುದು ನಮ್ಮ ಅಭಿಪ್ರಾಯವಾಗಿರುತ್ತದೆ. ಆದ್ದರಿಂದ ಅಲಕ್ಷಿಸಬಹುದಾದಂಥದ್ದು ದೋಷವಾಗಿರುವುದಿಲ್ಲ. ಆರೋಪ ಕುರಿತು ಉತ್ತರಿಸುವಾಗ, ಆಪಾದಿತರು ಪ್ರಾಸಿಕ್ಯೂಷನ್‌ನ ಅಪರಾಧ ನಿರ್ಣಯಕ್ಕೆ ಹಕ್ಕುಗಳ ಮಟ್ಟಿಗೆ ಆಪಾದಿತರು ಖುಲಾಸೆಯಾಗಲು ಬದ್ಧರಾಗಿರುತ್ತಾರೆ. ಆದ್ದರಿಂದ, ಇದು ಪ್ರಕರಣದ ಮೂಲಕ್ಕೆ ಬಾಧಕವನ್ನುಂಟು ಮಾಡುವಂತಿದ್ದು, ಇದು ನ್ಯಾಯದ ವಿಫಲತೆಗೆ ಕಾರಣವಾಗಿರುತ್ತದೆ.

(ಸಿ) ಅಧಿವಿಚಾರಣಾ ನ್ಯಾಯಾಲಯವು ಆರೋಪದ ಮೇಲಿನ ನಿರ್ಣಯವನ್ನು ದಾಖಲಿಸಲು ವಿಫಲವಾದಲ್ಲಿ, ಅಪೀಲು ನ್ಯಾಯಾಲಯವು ಆ ಕುರಿತು ನಿರ್ಣಯವನ್ನು ದಾಖಲು ಮಾಡಲು ಅಧಿಕಾರವನ್ನು ಹೊಂದಿರುತ್ತದೆ. ವಾದವನ್ನು ಒಪ್ಪಿಕೊಳ್ಳಬಹುದೆಂದು ಭಾವಿಸಿದಾಗ, ತರುವಾಯ ಆ ಸಂದರ್ಭದಲ್ಲಿ, ಅಪೀಲು ನ್ಯಾಯಾಲಯವು, ಅಧಿವಿಚಾರಣಾ ನ್ಯಾಯಾಲಯವಾಗಿದ್ದರೆ ಹೇಗೋ ಹಾಗೆ ಆ

ಮೊಟ್ಟ ಮೊದಲ ಸಂದರ್ಭದಲ್ಲೇ ಆರೋಪದ ಮೇಲಿನ ನಿರ್ಣಯವನ್ನು ನೀಡಬಹುದಾಗಿರುತ್ತದೆ. ಆದರೆ ಇದನ್ನು ಅಪೀಲು ನ್ಯಾಯಾಲಯವು ಮಾಡಲಾಗುವುದಿಲ್ಲ. ಅಧಿವಿಚಾರಣಾ ನ್ಯಾಯಾಲಯ ಮಾತ್ರವೇ ತನ್ನ ನಿರ್ಣಯಗಳನ್ನು ದಾಖಲಿಸಬಹುದಾಗಿರುತ್ತದೆ. ಅಪೀಲು ನ್ಯಾಯಾಲಯವು ಉತ್ತರಿಸದಿರುವಂಥ ಆರೋಪ ಕುರಿತು ಮೊಟ್ಟ ಮೊದಲ ಬಾರಿಗೆ ತೀರ್ಪನ್ನು ನೀಡುವಂತಿರುವುದಿಲ್ಲ.

15. ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು, ತನ್ನ ತೀರ್ಪುಗಳಲ್ಲಿ ಅಧಿವಿಚಾರಣಾ ನ್ಯಾಯಾಲಯದ ನಿರ್ಣಯವನ್ನು ಬೆಂಬಲಿಸುವ ಸಾಕಷ್ಟು ಕಾರಣಗಳು ಇಲ್ಲದಿದ್ದಲ್ಲಿ, ಅಂಥ ನಿರ್ಣಯವು ತೀರ್ಪನ್ನು ನಿರರ್ಥಕಗೊಳಿಸುತ್ತದೆಂದು ಅಭಿಪ್ರಾಯಪಟ್ಟಿರುತ್ತದೆ. ಪ್ರಸ್ತುತ ವಾಸ್ತವಾಂಶಗಳೂ ಕೂಡ ದಿಕ್ಕು ತಪ್ಪಿಸುವಂತವಾಗಿವೆ. ಅಲ್ಲಿ ಒಂದು ನಿರ್ಣಯವನ್ನೂ ಕೂಡ ಅಧಿವಿಚಾರಣಾ ನ್ಯಾಯಾಲಯವು ದಾಖಲಿಸಿರುವುದಿಲ್ಲ. ಆರೋಪ ಸಂ.1 ನ್ನು ಕುರಿತಂತೆ ನಿರ್ಣಯವನ್ನು ದಾಖಲಿಸಿರದಿರುವಲ್ಲಿ ತೀರ್ಪು ಅಸಮರ್ಥನೀಯವಾಗಿ ಬಿಡುತ್ತದೆ.

16. ನಿರ್ಣಯವನ್ನು ದಾಖಲಿಸದಿರುವಲ್ಲಿ, ಅದನ್ನು ಖುಲಾಸೆಯಾಗಿದೆಯೆಂದು ಭಾವಿಸಿ ಅರ್ಥೈಸಿಕೊಳ್ಳಬೇಕೆಂಬುದು ಆಪಾದಿತರ ವಾದವಾಗಿರುತ್ತದೆ. ವಾದವನ್ನು ಒಪ್ಪಿಕೊಳ್ಳಲು ನಾವು ಸಮರ್ಥನೀಯರಾಗಿರುವುದಿಲ್ಲ. ಮೊದಲ ಆರೋಪವು ಭಾರತ ದಂಡ ಸಂಹಿತೆಯ 302ನೇ ಪ್ರಕರಣದಡಿಯಲ್ಲಿನದಾಗಿರುತ್ತದೆ. ಎರಡನೇ ಆರೋಪವು ಭಾರತ ದಂಡ ಸಂಹಿತೆಯ 396ನೇ ಪ್ರಕರಣದಡಿಯಲ್ಲಿನದಾಗಿರುತ್ತದೆ. ಆರೋಪ ಸಂ.1ಕ್ಕೆ ಉತ್ತರವಿರುವುದಿಲ್ಲ. ಭಾರತ ದಂಡ ಸಂಹಿತೆಯ 302ನೇ ಪ್ರಕರಣದಡಿಯಲ್ಲಿ ಇದನ್ನು ಭಾವಿತ ಖುಲಾಸೆಯೆಂದು ಪರಿಗಣಿಸಿದಲ್ಲಿ, ಇದು ಕೊಲೆ ಹಾಗೂ ಡಕಾಯಿತಿ ಎರಡೂ ಆಗಿರುವುದರಿಂದ ಭಾರತ ದಂಡ ಸಂಹಿತೆಯ 396ನೇ ಪ್ರಕರಣದಡಿಯಲ್ಲಿ ಅಪರಾಧ ನಿರ್ಣಯವಾಗುವುದಿಲ್ಲ. ಆದ್ದರಿಂದ, ಅಂಥ ವಾದವನ್ನು ಒಪ್ಪಿಕೊಳ್ಳಲಾಗುವುದಿಲ್ಲ. ಈ ಪ್ರಕರಣದಲ್ಲಿನ ವಾಸ್ತವಾಂಶಗಳು ಹಾಗೂ ಸಂದರ್ಭಗಳಲ್ಲಿ ಭಾವಿತ ಖುಲಾಸೆ ಇರುವುದಿಲ್ಲ.

17. ಆರೋಪ ಸಂ.1 ಮತ್ತು ನಿರ್ಧರಣೆಗೆ ಸಂಬಂಧಿಸಿದ ಅಂಶಗಳ ಮೇಲೆ ನಿರ್ಣಯವನ್ನು ದಾಖಲಿಸುವಲ್ಲಿನ ಅಧಿವಿಚಾರಣಾ ನ್ಯಾಯಾಲಯದ ವಿಫಲತೆಯು ಭಾರತ ದಂಡ ಪ್ರಕ್ರಿಯಾ ಸಂಹಿತೆಯ 354ನೇ ಪ್ರಕರಣದ ಆಜ್ಞಾಪಕ ಉಪಬಂಧಗಳ ಉಲ್ಲಂಘನೆಗೆ ಕಾರಣವಾಗುತ್ತದೆ. ತೀರ್ಪು ಕಾನೂನುಬಾಹಿರವಾದುದಾಗಿರುತ್ತದೆ. ಇದು ತೀರ್ಪಿನ ದೋಷವಾಗಿರದೆ, ತೀರ್ಪಿನಲ್ಲಿಯೇ ಇರುವ ದೋಷವಾಗಿರುತ್ತದೆ.

18. ನಿರ್ಧರಣೆಗೆ ಸಂಬಂಧಿಸಿದಂತೆ ಆರೋಪಗಳನ್ನು ಹಾಗೂ ತರುವಾಯದ ಅಂಶಗಳನ್ನು ರೂಪಿಸಿದಾಗ್ಯೂ, ಅಧಿವಿಚಾರಣಾ ನ್ಯಾಯಾಲಯವು ನಿರ್ಧರಣೆಗೆ ಸಂಬಂಧಿಸಿದಂತೆ ಎಲ್ಲಾ ಅಂಶಗಳಿಗೂ ಉತ್ತರಿಸಿರುವುದಿಲ್ಲ. ಇದರಿಂದ ಅಧಿವಿಚಾರಣಾ ನ್ಯಾಯಾಲಯವು ಯುಕ್ತವಾಗಿ ಗಮನಹರಿಸದೆ ಮಾಡಿರುವ ಕಾರ್ಯವೆಂಬುದು ಸ್ಪಷ್ಟವಾಗಿ ಗೋಚರವಾಗುತ್ತದೆ. ಪರಿಶೀಲನಾಂಶಗಳನ್ನು ರೂಪಿಸಿದ ತರುವಾಯ ಕೂಡ, ಅಧಿವಿಚಾರಣಾ ನ್ಯಾಯಾಲಯವು, ಎಲ್ಲಾ ಪರಿಶೀಲನಾಂಶಗಳಿಗೂ ಉತ್ತರಿಸಲಾಗುವುದೆಂಬುದನ್ನು ಖಚಿತಪಡಿಸಿಕೊಳ್ಳಲು ಯಾವುದೇ ಎಚ್ಚರಿಕೆಯನ್ನು ತೆಗೆದುಕೊಂಡಿರುವುದಿಲ್ಲ. ಅಧಿವಿಚಾರಣಾ ನ್ಯಾಯಾಲಯವು ವಿಷಯವನ್ನು ಸಂಪೂರ್ಣವಾಗಿ ಗಮನಕೊಟ್ಟು ವಿಶ್ಲೇಷಿಸಿಲ್ಲವೆಂಬ ದೃಷ್ಟಿಯಲ್ಲಿ ತೀರ್ಪು ಊರ್ಜಿತವಾಗುವುದಿಲ್ಲ.

19. ಮೇಲೆ ಹೇಳಿದ ಕಾರಣಗಳಿಗಾಗಿ, ಅಧಿವಿಚಾರಣಾ ನ್ಯಾಯಾಲಯದ ತೀರ್ಪು ಭಾರತ ದಂಡ ಪ್ರಕ್ರಿಯಾ ಸಂಹಿತೆಯ 354ನೇ ಪ್ರಕರಣದ ಆಜ್ಞಾಪಕ ಉಪಬಂಧಗಳಿಗೆ ವಿರುದ್ಧವಾಗಿರುತ್ತದೆಂದು ನಾವು ಅಭಿಪ್ರಾಯಪಟ್ಟಿರುತ್ತೇವೆ. ಅಧಿವಿಚಾರಣಾ ನ್ಯಾಯಾಲಯದ ತೀರ್ಪನ್ನು ಕೇವಲ ಕಾನೂನಿನ ಪ್ರಶ್ನೆ ಕುರಿತಂತೆ ಮಾತ್ರ ಆಯೋಜಿಸುವಾಗ ರದ್ದುಪಡಿಸಬೇಕಾದ ಅವಶ್ಯಕತೆಯಿರುತ್ತದೆ. ಈ ಸಂದರ್ಭಗಳಡಿಯಲ್ಲಿ, ಪ್ರಕರಣದ ಗುಣಾರ್ಹತೆಗಳಿಗೆ ಗಮನಕೊಡಬೇಕಾದ ಅವಶ್ಯಕತೆ ಇರುವುದಿಲ್ಲ.

20. ಆದಾಗ್ಯೂ, ಹಾಗೆ ಮಾಡುವಾಗ, ವ್ಯಥಾ ಸಮಯವು ವ್ಯರ್ಥವಾಗುತ್ತಿರುವ ಬಗ್ಗೆ ನಾವು ಎಚ್ಚರದಿಂದಿರಬೇಕಾಗಿರುತ್ತದೆ. ತೀರ್ಪು ಮಾತ್ರವೇ ದೋಷಪೂರ್ಣವಾದದಾಗಿದೆಯೆಂದು ನಾವು ಅಭಿಪ್ರಾಯಪಟ್ಟಿದ್ದು, ಆರೋಪಗಳನ್ನು ರೂಪಿಸುವಲ್ಲಿ ಅಥವಾ ಹೊಸ ಸಾಕ್ಷ್ಯವನ್ನು ದಾಖಲಿಸುವಲ್ಲಿ ಯಾವುದೇ ದೋಷ ಅಥವಾ ತಪ್ಪು ನಮಗೆ ಕಂಡು ಬರದಿರುವುದರಿಂದ, ಆರೋಪಗಳನ್ನು ಮತ್ತೆ ರೂಪಿಸುವ ಅಥವಾ ಸಾಕ್ಷ್ಯ ಮುಂತಾದವುಗಳನ್ನು ಹೊಸದಾಗಿ ದಾಖಲಿಸುವ ಪ್ರಶ್ನೆ ಉದ್ಭವಿಸುವುದೇ ಇಲ್ಲ. ಆದ್ದರಿಂದ, ಈಗ ಮಾಡಬೇಕಾದುದೇನೆಂದರೆ, ವಿಷಯವನ್ನು ಮತ್ತೆ ಸುನಾವಣೆ ಮಾಡುವುದಕ್ಕೆ ಆದೇಶಿಸುವುದು, ತರುವಾಯ ತೀರ್ಪನ್ನು ನೀಡುವುದಾಗಿರುತ್ತದೆ. ನಮ್ಮ ಪ್ರಕಾರ ಇದು ಕಾನೂನುಸಮ್ಮತ ಹಾಗೂ ನ್ಯಾಯಯುತವಾದುದಾಗಿರುತ್ತದೆ.

21. (ಎ) ತತ್ಪರಿಣಾಮವಾಗಿ, ಕ್ರಿಮಿನಲ್ ಅಪೀಲು ಸಂಖ್ಯೆ: 1289/2010 ಹಾಗೂ 810/2011ರನ್ನು ಅಂಗೀಕರಿಸಲಾಗಿರುತ್ತದೆ. ದಿನಾಂಕ 22.9.2010ರ ತೀರ್ಪು ಹಾಗೂ ಬೆಂಗಳೂರಿನ ಕೇಂದ್ರ ಕಾರಾಗೃಹ ಆವರಣದ XXXIV ನೇ ಹೆಚ್ಚುವರಿ ನಗರ ಸಿವಿಲ್ ಹಾಗೂ ಸತ್ರ ನ್ಯಾಯಾಲಯದ ನ್ಯಾಯಾಧೀಶರು (ವಿಶೇಷ ನ್ಯಾಯಾಲಯ) ಇವರು ದಿನಾಂಕ 30.09.2010ರಂದು ಹೊರಡಿಸಿದ ಎಸ್.ಸಿ.ಸಂ.744/2001 ರಲ್ಲಿನ ದಂಡನೆಯನ್ನು ರದ್ದುಪಡಿಸಲಾಗಿರುತ್ತದೆ. ತರುವಾಯ, ಕ್ರಿಮಿನಲ್ ಆರ್.ಸಿ. ಸಂ7/2010 ಪರಿಗಣನೆಗೆ ಉದ್ಭವಿಸುವುದಿಲ್ಲ. ತದನುಸಾರವಾಗಿ ವಿಲೆ ಮಾಡಲಾಗಿರುತ್ತದೆ.

ಬಿ. ವಿಷಯವನ್ನು ಇಲ್ಲಿ ಪ್ರಸ್ತಾಪಿಸಿದಂತೆ ಹೊಸದಾಗಿ ಪರಿಗಣಿಸಲು ಅಧಿವಿಚಾರಣಾ ನ್ಯಾಯಾಲಯಕ್ಕೆ ಹಿಂದಿರುಗಿಸಲಾಗಿರುತ್ತದೆ.

ಸಿ. ದೀರ್ಘ ಕಾಲದಿಂದ ಬಾಕಿಯಿರುವುದರಿಂದ, ವಿಷಯವನ್ನು ದಿನಾಂಕ 07.08.2017ರಂದು ಅಧಿವಿಚಾರಣಾ ನ್ಯಾಯಾಲಯದ ಮುಂದೆ ವಿಚಾರಣೆಗೆ ಬರುವಂತೆ ಪಟ್ಟಿಗೆ ಸೇರಿಸಿಕೊಳ್ಳಲು ನಿರ್ದೇಶಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿನ ತ್ವರಿತತೆಯನ್ನು

ದೃಷ್ಟಿಯಲ್ಲಿಟ್ಟುಕೊಂಡು ಆಪಾದಿತರ ಹಾಜರಿಗೆ ವಿನಾಯಿತಿ ನೀಡಲಾಗಿರುತ್ತದೆ. ಅಧಿವಿಚಾರಣಾ ನ್ಯಾಯಾಲಯವು, ನಂತರದ ದಿನಗಳಲ್ಲಿ ಕಾನೂನಿಗನುಸಾರವಾಗಿ ಅವರ ಹಾಜರಿಯನ್ನು ಸುನಿಶ್ಚಿತಗೊಳಿಸಿಕೊಳ್ಳಬೇಕು.

ಡಿ. ಯಾವುದೇ ಹೆಚ್ಚಿನ ಸಾಕ್ಷ್ಯವನ್ನು ದಾಖಲಿಸಿಕೊಳ್ಳಬೇಕಾಗಿರುವುದಿಲ್ಲ.

ಇ. ಆರೋಪಗಳನ್ನು ಬಾಧಕಗೊಳಿಸದೆ ಉಳಿಸಿಕೊಳ್ಳಬೇಕಾಗಿರುತ್ತದೆ.

ಎಫ್. ಅಧಿವಿಚಾರಣಾ ನ್ಯಾಯಾಲಯವು, ಈಗಿನ ಪ್ರಶ್ನಿತ ತೀರ್ಪಿನ ಮೂಲಕ ಯಾವುದೇ ರೀತಿಯಲ್ಲಿ ಪ್ರಭಾವಿತಗೊಳ್ಳತಕ್ಕದ್ದಲ್ಲ.

ಜಿ. ಅಧಿವಿಚಾರಣಾ ನ್ಯಾಯಾಲಯವು ವಾದ–ವಿವಾದಗಳಿಗೆ ಹಾಗೂ ಸಾಕ್ಷ್ಯಗಳ ಕಡೆಗೆ ಹೊಸದಾಗಿ ಗಮನನೀಡಿ ತನ್ನ ತೀರ್ಪನ್ನು ನೀಡಬೇಕು. ಇದನ್ನು 2017ರ ಅಕ್ಟೋಬರ್ ಕೊನೆಯ ವೇಳೆಗೆ ಪೂರ್ಣಗೊಳಿಸಲೇಬೇಕು. ಅವಶ್ಯಕವಾದಲ್ಲಿ, ಅಧಿವಿಚಾರಣಾ ನ್ಯಾಯಾಲಯವು ಪ್ರತಿದಿನ ವಿಷಯವನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಲು ಸ್ವತಂತ್ರವಾಗಿರುತ್ತದೆ.

ಕೂಡಲೇ, ದಿನಾಂಕ 05.08.2017ರ ವೇಳೆಗೆ ದಾಖಲೆಗಳು ಅಧಿವಿಚಾರಣಾ ನ್ಯಾಯಾಲಯಕ್ಕೆ ತಲುಪುತ್ತವೆಂಬುದನ್ನು ಖಚಿತಪಡಿಸಿಕೊಂಡು ಇವುಗಳನ್ನು ಕಳುಹಿಸಿಕೊಡಲು ಕಚೇರಿಗೆ ನಿರ್ದೇಶಿಸಲಾಗಿರುತ್ತದೆ.

---